ದೇವಸ್ಥಾನದಲ್ಲಿ ವಿಜಯದಶಮಿಯಂದು ರಾಮ ಪಟ್ಟಾಭಿಷೇಕದ ಮಂಗಳ ಮುಕ್ತಾಯವಾದ ಮೇಲೆ, ಕಾರ್ಯಕ್ರಮದಲ್ಲಿ ಪಾಲುಗೊಂಡಿದ್ದವರಿಗೆಲ್ಲಾ ಧನ್ಯವಾದ ಸಮರ್ಪಿಸುವ ಕೆಲಸ ಪ್ರಸಾದನ ಮೇಲೆ ಬಿದ್ದಿತ್ತು. ಅವನ ಮಾತಿಗಿಂತ ಅವನ ಧ್ವನಿಯ ಮೋಡಿಗೇ ಮರುಳಾಗಿ ಜನ ನಿಶ್ಯಬ್ದವಾಗಿ ನಿಂತು ಕೇಳಿಸಿಕೊಳ್ಳುತ್ತಿದ್ದರು. ಈ ದಿನದ ಮಾತೂ ಸಹ ಬುದ್ಧಿಮತ್ತೆಯಿಂದ ಕೂಡಿದ್ದು, ಆತ ಓದಿದ್ದ ಪಾಂಡಿತ್ಯವೆಲ್ಲಾ ಹೃದಯಾಂತರಾಳದಿಂದ ಪಾಕಗೊಂಡು ಹೊರ ಬೀಳುತ್ತಿತ್ತು. ಕಾರ್ಯಕ್ರಮಕ್ಕೆ ಸಂಬಂಧಪಟ್ಟ ಮಾತಿನ ಮಾಲೆಗೆ ತನ್ನದೇ ಮತ್ತಷ್ಟು ಅಭಿಪ್ರಾಯಗಳ ಮಣಿಗಳನ್ನು ಪೋಣಿಸಿ ಹೇಳುತ್ತಿದ್ದ. ಸೀತೆಯು ಪತಿವ್ರತೆ ಎನ್ನುವ ಸಾಮಾನ್ಯ ಹೊಗಳಿಕೆ ಜೊತೆ ಜೊತೆಗೆ ಇಂದು ವಿಚಿತ್ರವಾಗಿ ರಾಮ–ಸೀತೆ ಬಗ್ಗೆ ಅವನು ಆಧುನಿಕ ಚಿಂತನೆ ವ್ಯಕ್ತಪಡಿಸಿಬಿಟ್ಟ!... ಸೀತೆ ರಾಮನಿಗಿಂತ ಮೇಲ್ಮಟ್ಟದವಳೆಂದ... ರಾಮನ ಬೇಜವಾಬ್ದಾರಿಯಿಂದ ಸೀತಾಪಹರಣವಾಯಿತು. ರಾವಣನ ಸೆರೆಯಲ್ಲಿ ಹಿಂಸೆ ಅನುಭವಿಸಿ ಸೊರಗಿ ಹೋಗಿದ್ದವಳಿಗೆ ರಾಮ ಸಂತೈಸುವ ಬದಲಾಗಿ ಅವಳನ್ನು ಅಗ್ನಿಪರೀಕ್ಷೆಗೆ ಒಡ್ಡಿಬಿಟ್ಟ. ಅದಲ್ಲದೇ ಯಾರದ್ದೋ ಬೀದೀಲಿ ಹೋಗುವವನ ಮಾತಿನಿಂದಾಗಿ ತುಂಬಿದ ಗರ್ಭಿಣಿಯನ್ನು ಕರುಣೆ ಮರೆತು ಕಾಡಿಗೆ ಅಟ್ಟಿದ್ದ. ಸೀತೆ ಎಲ್ಲ ಸಂದರ್ಭಗಳಲ್ಲೂ ತನ್ನ ತಾಳ್ಮೆಯಿಂದ ಮೆರೆದಳು. ಒಂಟಿ ಪೋಷಕಳಾಗಿ ಎರಡು ಮಕ್ಕಳನ್ನು ಬೆಳೆಸಿದಳು. 'ಮರ್‍ಯಾದ ಪುರುಷ' ಎಂದು ರಾಮನನ್ನು ಹೊಗಳುವ ಬದಲು ಸೀತೆಯನ್ನು ಹೊಗಳಿ. ಅದು ವಾಸ್ತವ...! ಅವನ್ಯಾಕೆ ಸೀತೆಯನ್ನೇ ಪರವಹಿಸಿ, ರಾಮನನ್ನು ಹಿಂದಕ್ಕೆ ತಳ್ಳುತ್ತಿದ್ದಾನೆ.

ಅದರ ಮೂಲ ಬೇರು ಆ ಕೆಲವು ದಿನಗಳ ಹಿಂದಷ್ಟೇ ಗಂಗೆ, ಪಾಪು ಜೊತೆ ಮಾತನಾಡಿ ಮನೆಗೆ ಬಂದು ಉಪನ್ಯಾಸದ ಟಿಪ್ಪಣಿಗಳನ್ನು ಬದಲಾಯಿಸಿ ಕೊಂಡದ್ದರ ಫಲವಾಗಿತ್ತು.

ಗಂಗೆ ಮಾತ್ರ ಅವನ ಮಾತಿನ ಮೂಲದ ಅರಿವಿತ್ತು. ಸೀತೆ ಮೂಲಕ ತನ್ನನ್ನು ಮತ್ತು ರಾಮನ ಮೂಲಕ ಆತನನ್ನು ಕಾಣುತ್ತಿದ್ದಾನೆ. ಅವನ ಜೀವನ ಕಲುಕಿ ಈ ರೀತಿ ಅವನ ಮನೋಭಾವ ತಾಳಲು ಕಾರಣಳಾದ ತನ್ನನ್ನು ದೂಷಿಸಿಕೊಂಡಳು.

ಉತ್ಸವ ಮತ್ತೆ ದೇವಸ್ಥಾನಕ್ಕೆ ಹಿಂದಿರುಗಿದ ಮೇಲೆ ಗಂಗೆಗೆ ಕೈ ತುಂಬಾ ಕೆಲಸ. ಎಲ್ಲರೂ ತಮ್ಮ ಕರ್ತವ್ಯ ಮುಗಿಸಿ ಉಸ್ಸಪ್ಪ ಎಂದು ವಿಶ್ರಮಿಸಿಕೊಳ್ಳುವ ವೇಳೆಯಲ್ಲಿ ಇವಳ ಮೇಲೆ ಎಲ್ಲ ಒಪ್ಪ ಮಾಡುವ ಜವಾಬ್ದಾರಿ ಬೀಳುತ್ತಿತ್ತು. ಗಂಗೆ ಸ್ವಚ್ಛತೆ ಕೆಲಸ ಮಾಡುತ್ತಿದ್ದರೆ ಮಿಕ್ಕಂತೆ ಪ್ರಸಾದನನ್ನೂ ಕೂಡಿ ಮೂರ್‍ನಾಕು ಅರ್ಚಕರು, ಕಮಿಟಿ ಮುಖ್ಯಸ್ಥರ ಮೇಲುಸ್ತುವಾರಿಯಲ್ಲಿ ದೇವರಿಗೆ ಹಾಕಿದ್ದ ಚಿನ್ನ, ಬೆಳ್ಳಿ ಆಭರಣಗಳನ್ನು ಜತನ ಮಾಡುವುದಿತ್ತು. ಗಂಗೆ ತನ್ನ ಮಗಳೊಂದಿಗೆ ಹೊರ ದಿಡ್ಡಿ ಬಾಗಿಲ ಬಳಿ ಇದ್ದಾಗ, ಪ್ರಸಾದ ಉತ್ಸವ ಮೂರ್ತಿ ಜೊತೆಗೆ ಮತ್ತೆ ಕೆಲವರ ಸಮೇತ ನಡೆದುಬರುತ್ತಿದ್ದ. ಅಂದು ಉತ್ಸವವಾಗುತ್ತಿದ್ದಾಗ ಹೊಸ ನೀರಿನ ಚಿಲುಮೆಯಂತಿದ್ದ ಪ್ರಸಾದ ಈಗ ಬತ್ತಿದ ಚಿಲುಮೆಯಂತೆ ಆಗಿಬಿಟ್ಟಿದ್ದ. ಎಷ್ಟು ಪೇಲವನಾಗಿ ಹೋಗಿದ್ದಾನೆ ಎಂದು ಚಿಂತೆಗೊಳಗಾದಳು ಗಂಗೆ. ಅವನಿಗೆ ನಡೆಯಲೂ ಆಗದೆ ತತ್ತರಿಸುತ್ತಿದ್ದ. ಆಗ ದೇವಸ್ಥಾನದ ಶೀನಯ್ಯ ಹೋಗಿ ಅವನಿಗೆ ಬೀಳದಂತೆ ಆಸರೆಕೊಟ್ಟ. ಸುತ್ತ ಇದ್ದವರು,

'ಅವ್ರನ್ನ ಮನೆಗೆ ಕರ್‍ಕೊಂಡ್ ಹೋಗಿ ಬಿಟ್ಟುಬಿಡ್ರಪ್ಪಾ...' ಮನೆ ದೇವಸ್ಥಾನದ ಹಿಂಬದಿಯಲ್ಲೇ ಇದ್ದುದರಿಂದ ಪ್ರಸಾದನಿಗೆ ಶೀನಯ್ಯನ ಆಸರೆಯಲ್ಲಿ ನಡೆಯುವುದಕ್ಕಾಯಿತು. ಹೇಗೊ ಮನೆ ಸೇರಿಸಿಕೊಳ್ಳುವಷ್ಟರಲ್ಲಿ ತಂದೆ ಶ್ರೀಧರ ಭಟ್ಟರೂ ಗಾಬರಿಯಿಂದ ಓಡಿ ಮನೆ ಹೊಕ್ಕರು.

'ಏನಾಯ್ತು ಪ್ರಸಾದೂ...? ಏನಾಯ್ತೊ...!? ಅವರಿಗೆ ಜೀವವೇ ಬಾಯಿಗೆ ಬಂದಂತಾಗಿತ್ತು. 'ತುಂಬಾ ಓಡಾಡಿದ್ದಕ್ಕೆ ಆಯಾಸ ಆಯ್ತೊ ಏನೊ...! ಇರು... ನಿಂಬೆ ಹಣ್ಣಿನ ಪಾನಕ ಮಾಡಿ ತರ್‍ತೀನಿ' ಎಂದು ಅವನು ಮಲಗಿದ ಮೇಲೆ ಅಡುಗೆ ಮನೆಗೆ ಓಡಿದರು. ಭಯ ಬಿದ್ದ ಗಂಗೆ ತನ್ನ ಮಗಳೊಂದಿಗೆ ಓಡಿಯೇ ಬಂದು ಕೋಣೆಯ ಆಚೆ ನಿಂತಳು. ಆತಂಕದ ಆ ವೇಳೆಯಲ್ಲಿ, ಯಾರು ಏನೇನು ಕುಹುಕದ ಮಾತಾಡುತ್ತಾರೊ ಎಂಬ ಆಲೋಚನೆ ಅವಳಿಗೆ ಬರಲಿಲ್ಲ. ಪ್ರಸಾದನ ಬಗ್ಗೆಯ ಕಾಳಜಿ ಅವಳ ಮೈಮನಗಳನ್ನೆಲ್ಲಾ ತುಂಬಿಕೊಂಡಿತ್ತು.

'ಪ್ರಸಾದನಿಗೆ ಏನಾಯ್ತು...?' ಎಂದು ಹೇಳುತ್ತ ಬಂದ ಹೆಣ್ಣಿನ ದನಿ ಕೇಳಿ ಗಂಗೆ ತಿರುಗಿ ನೋಡಿದಳು. ಸುನಂದ ಬನ್ನಪ್ಪನವರನ್ನು ಕಂಡೊಡನೆ ಗಂಗೆ ಆಕೆ ಕಾಲು ಹಿಡಿದು ಅಳ ತೊಡಗಿಬಿಟ್ಟಳು.

'ಅವ್ವಾರೇ... ಪ್ರಸಾದಪ್ಪಂಗೆ ಏನೋ ಆಗಿದೆ... ಅವ್ರನ್ನ ಪಾರು ಮಾಡ್ರೀಯವ್ವಾ... ಮುಂಜಾನೆಯಿಂದ ಅಷ್ಟು ಛಲೋ ಇದ್ದೋರು... ಹಿಂಗ್ಯಾಕೆ ಆಗಿಬಿಟ್ಟದ್ದಾರ್‍ರೀ...!'

ಸುನಂದ ಅವಳಿಗೆ ಸಮಾಧಾನಪಡಿಸುತ್ತಾ, 'ಹೀಗ್ಯಾಕೆ ಅಳ್ತೀ ಗಂಗಾ...? ಏನೂ ಆಗಿಲ್ಲ... ಆಯಾಸಕ್ಕೆ ಹೀಗಾಗಿದೆ ಅಷ್ಟೇ... ಎಲ್ಲಾ ಸರ್‍ಯಾಗತ್ತೆ. ಡಾಕ್ಟರಿಗೆ ತೋರಿಸಿದ್ರಾಯ್ತು.'

ಬಾಗಿಲ ಬಳಿ ಇಂದ್ರಾ ಗಾಂಧಿ ಜೊತೆ ನಿಂತ ಗಂಗೆಯನ್ನು ನೋಡುತ್ತ ಪ್ರಸಾದನಿಗೆ ಇಲ್ಲದ ಶಕ್ತಿ ಮತ್ತೆ ಬಂದಂತಾಯಿತು. ಅವನು ಅವಳನ್ನು ಒಳಗೆ ಬರುವಂತೆ ಕೈಮಾಡಿ ಕರೆದ.

'ಗಂಗಾ... ಇಲ್ಲಿ ಬಾ... ಪಾಪೂನೂ ಕರ್‍ಕೊಂಡು ಬಾ...'

ಪಾಪು ಬೆದರಿದ ಗುಬ್ಬಚ್ಚಿ ಮರಿಯಂತಾಗಿದ್ದಳು. ಅಮ್ಮ ಅವಳ ಕೈ ಬಿಗಿಯಾಗಿ ಹಿಡಿದುಕೊಂಡು ಪ್ರಸಾದನ ಬಳಿ ಹೋದಳು. ಅದೇ ವೇಳೆಗೆ ಶ್ರೀಧರ ಭಟ್ಟರೂ ಪಾನಕ ಮಾಡಿ ತಂದು–

'ಕುಡಿಯಪ್ಪಾ...' ಎನ್ನುತ್ತಾ ಮಂಚದ ಪಕ್ಕದ ಮರದ ಸ್ಟೂಲಿನ ಮೇಲೆ ಕುಳಿತರು. ಅಷ್ಟರಲ್ಲಿ ಶಿವಣ್ಣನ ಸವಾರಿಯೂ ಚಿತ್ತೈಸಿತು.

'ಏನ್ರೀ... ಪ್ರಸಾದಪ್ಪಂಗೆ ಏನಾಯ್ತ್ರೀ...?' ಎಂದು ದೊಡ್ಡ ದನಿ ಮಾಡಿ, ನುಗ್ಗಿ ಬಂದವನೇ ಪ್ರಸಾದನ ನಾಡಿ ಹಿಡಿದು ನೋಡಿದ. ತಲೆ ಆಡಿಸಿ ಮ್ಲಾನನಾಗಿ ಹೇಳಿದ.

'ಭಟ್ರೇ... ಮೊದ್ಲಿಗೆ ಆ ಹೆಂಗ್ಸು... ಗಂಗಿ ಮತ್ತವಳ ಪೋರೀನ ಆಚೆ ಕಳಸ್ರಿ... ಅವ್ಳು ಇಲ್ಲೇನ್ ಮಾಡ್ಲಿಕ್ಕೆ ಹತ್ತ್ಯಾಳೆ...? ಯಾಕ ಒಳೀಕೆ ಬಿಟ್ರಿ...? ಪ್ರಸಾದಪ್ಪಂಗೆ ಆರಾಮ ಬೇಕ್ರೀ... ಯಾರ್‍ಯಾರೊ ಬೀದೀಲಿ ಹೋಗಾವ್ರು ಬಂದ್ರೆ ಹ್ಯಾಂಗ್ರೀ...? ಮೊದ್ಲಿಗೆ ಅವಳನ್ನ ಕಳಸ್ರಿ... ಆಮ್ಯಾಗ ನಾನು ಪ್ರಸಾದಪ್ಪನವ್ರನ್ನ ನೆಟ್ಟಗ ಮಾಡ್ತೀನ್ರೀ...'

ಅವನ ಮಾತು ಕೇಳಿಸಿಕೊಂಡ ಪ್ರಸಾದ ನೋವಿನಿಂದ ನರಳಿದ, 'ಶಿವಣ್ಣ ನೀನ್ಯಾಕೆ ಬಂದೆ...? ನಿನ್ನ ಶುಶ್ರೂಷೆನೂ ಬ್ಯಾಡ... ನಿನ್ನ ಔಷಧಿನೂ ಬೇಡ... ನಿನ್ನ ಸೆಳೆತದಿಂದ ನಾನು ಈಚೆಗೆ ಬಂದು ಬಿಟ್ಟಿದ್ದೇನೆ... ದೇವರ ದಯೆ...!' ಎಂದು ತಾತ್ಸಾರದಿಂದ ಹೇಳಿ ಮತ್ತೆ ಗಂಗೆಯತ್ತ ಕಣ್ಣು ಹೊರಳಿಸಿ–

'ಗಂಗಾ...' ಎಂದು ಕೂಗಿದ. ಮತ್ತೆ ಅವಳತ್ತ ಕೈ ಚಾಚಿ, 'ನೀನು ಗಂಗೆಯೇ ಇದೀಯ...! ನನ್ನ ಮನಸಿನ ಕಲ್ಮಶ ತೊಳೆದು, ನಿರ್ಮಲವಾಗಿಸಿದಿ... ನನ್ನ ಬಾಯಿಂದ ಸತ್ಯ ಹೇಳುವ ಧೈರ್ಯ ಬಂದಿದೆ. ಹೇಳಿ, ನಿಶ್ಚಿಂತೆಯಿಂದ ದೇವರ ಪಾದ ಸೇರುತ್ತೇನೆ...!' ಅವನ ತಂದೆಗೆ ಮಗನ ದೀರ್ಘ ಮಾತು ಕಳವಳ ಹೆಚ್ಚಿಸಿತು.

'ಪ್ರಸಾದ, ತುಂಬ ಮಾತಾಡಿ ದಣಿಯ ಬೇಡಪ್ಪಾ... ಸ್ವಲ್ಪ ಪಾನಕ ಕುಡಿದು ಸುಧಾರಿಸಿಕೊ... ನಾಳೆ ಬೇಕಾದ್ರೆ ಅದೇನು ಹೇಳಬೇಕೊ ಅದನ್ನು ಹೇಳುವಿಯಂತೆ...'

ಪ್ರಸಾದನೆಂದ, 'ಇಲ್ಲಪ್ಪಾ... ಇಷ್ಟೂ ವರುಷ ಮನಸ್ಸಿನಲ್ಲಿ ಅದುಮಿಟ್ಟುಕೊಂಡಿದ್ದ ಕೆಲವು ವಿಚಾರ ಹೊರ ಹಾಕಿಬಿಟ್ಟರೇ ನನಗೆ ಸಮಾಧಾನ. ಅಲ್ಲಿ ತನಕ ಪಾನಕ, ಪಣಿಯಾರಾ ಏನೂ ಬೇಡ... ಮೊದಲು ನನ್ನ ಮಾತು ಹೇಳಿಬಿಡ್ತೀನಿ... ಅಡ್ಡ ಬರಬೇಡಿ... ಗಂಗಾ...' ಎಂದು ಮತ್ತೆ ಅವಳನ್ನ ಹತ್ತಿರಕ್ಕೆ ಬರ ಹೇಳಿದ...' ಗಂಗಾ, ನನ್ನನ್ನು ಎಬ್ಬಿಸಿ ಕೂರಿಸು...

## ಸಂತೆ

ಮೂರು ದಿನದ ಸಂತೆ
ಮುಗಿಸ್ಕೋಬೇಕು ವ್ಯಾಪಾರ
ಬೇಡ್ವಾದ್ದನ್ನೆಲ್ಲಾ ತುಂಬ್ಕೋತಿದ್ರೆ
ಮುಂದೈತೆ ಗ್ರಹಚಾರ!

– ಸಂತೆಬೆನ್ನೂರು
ಫೈಜ್ನಾಟ್ರಾಜ್



ಈಶ್ವರ